

ಇದ್ದರೂ ವ್ಯಕ್ತಿಗಳಿಗೆ ರಕ್ಷಣೆ ಕೊಡುವುದು ಕಾನೂನಿನ ಆದ್ಯ ಉದ್ದೇಶ. ಹಾಗಾಗಿ ಇಂತಹ ಸಂಬಂಧದಲ್ಲಿ ಇರುವ ವ್ಯಕ್ತಿಗಳಿಗೂ ಕಾನೂನಿನ ರಕ್ಷಣೆ ಇದೆ ಎನ್ನುವ ತೀರ್ಪು ನೀಡಿದೆ ಸರ್ವೋಚ್ಚ ನ್ಯಾಯಾಲಯ. **[S Khushboo Vs. Kanniammal (2010)].**

ಮದುವೆಯೆಂಬುದು ದೊಡ್ಡ ಜವಾಬ್ದಾರಿ, ಸಂಕಷ್ಟ ಅನುಭವಿಸುವಾಗ ಅದರಿಂದ ಹೊರಬರುವ ಪ್ರಕ್ರಿಯೆ ಬಹಳ ಸಂಕೀರ್ಣವಾದದ್ದು ಮತ್ತು ಹಣಕಾಸಿನ ನಷ್ಟ ಕೂಡ ಎಂದುಕೊಂಡು ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಇರುವುದು ಎಂದರೆ ಸ್ವೇಚ್ಛೆಯಾಗಿ ಯಾವುದೇ ಹೊಣೆಗಾರಿಕೆ ಇಲ್ಲದೆ ಇರಬಹುದು ಎಂದುಕೊಂಡರೆ ಆಭಾಸವಾದೀತು. ಅಂತಹ ಸಂಬಂಧಗಳಿಗೂ ಪರಸ್ಪರ ಉತ್ತರದಾಯಿತ್ವ ಇರಬೇಕು ಎನ್ನುವ ಸಾಂವಿಧಾನಿಕ ಆಶಯವನ್ನು ಎತ್ತಿಹಿಡಿಯಲೆಂದೇ **Indra Sarma Vs. V K V Sarma (2013)** ಈ ಪ್ರಕರಣದಲ್ಲಿ ಇಂತಹ ಸಂಬಂಧದಲ್ಲಿ ಇರುವಾಗ ಹೆಂಗಸಿನ ಮೇಲೆ ಜೊತೆಗಾರನಿಂದ ದೈಹಿಕ, ಮಾನಸಿಕ, ಭಾವನಾತ್ಮಕ ದೌರ್ಜನ್ಯ ಉಂಟಾದರೆ ಅದನ್ನು ಕೌಟುಂಬಿಕ ದೌರ್ಜನ್ಯ ತಡೆಗಟ್ಟುವಿಕೆ ಕಾನೂನು 2005, ಇದರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಂದು ಗುರುತಿಸಲಾಗಿದೆ. ಇಬ್ಬರು ಹೆಂಗಸರು ಇಂತಹ ಸಂಬಂಧದಲ್ಲಿ ಕೂಡು ಜೀವನ ನಡೆಸುತ್ತಿದ್ದರೆ ಈ ರಕ್ಷಣೆಯು ಇದೇ ಕಾನೂನಿನ ಅಡಿಯಲ್ಲಿ ಅವರಿಗೂ ಅನ್ವಯವಾಗುತ್ತದೆ. ಹೆಂಗಸು ಗಂಡಸಿನ ಮೇಲೆ ಕೌಟುಂಬಿಕ ದೌರ್ಜನ್ಯ ವ್ಯಾಖ್ಯಾನದ ಅಡಿಯಲ್ಲಿ ಬರುವ ಯಾವುದೇ ಅಪರಾಧ ಎಸಗಿದರೆ ಆತನಿಗೆ ಭಾರತೀಯ ನ್ಯಾಯ ಸಂಹಿತೆ 2023 ಈ ಕಾನೂನಿನ ಅಡಿಯಲ್ಲಿ ರಕ್ಷಣೆ ಪಡೆಯುವ ಅವಕಾಶ ನೀಡಲಾಗಿದೆ.

ಮುಖ್ಯವಾಗಿ ಇಂತಹ ಸಂಬಂಧದಲ್ಲಿ ಇರುವವರು ಕಾನೂನಿನ ಯಾವುದೇ ರಕ್ಷಣೆ ಮತ್ತು ಪರಿಹಾರ ಪಡೆಯಬೇಕು ಎನ್ನುವ ಸಂದರ್ಭ ಒದಗಿಬಂದರೆ ಕಾನೂನು ಲಿವಿನ್ ರಿಲೇಷನ್‌ಶಿಪ್ ಎನ್ನುವುದಕ್ಕೆ ನೀಡಿರುವ ವ್ಯಾಖ್ಯಾನವನ್ನು ಪೂರೈಸಬೇಕಿರುತ್ತದೆ. ಅದರಂತೆ ಒಂದು ಕೂಡು ಸಂಬಂಧವು ಲಿವಿನ್ ರಿಲೇಷನ್‌ಶಿಪ್ ಎನಿಸಿಕೊಳ್ಳಬೇಕಾದರೆ ಆ ಸಂಬಂಧವು ದೀರ್ಘಾವಧಿಯದ್ದಾಗಿರಬೇಕು ಹಾಗೂ ಮಾನಸಿಕವಾಗಿ ಸ್ವಸ್ಥರಿರುವ ಇಬ್ಬರು ವಯಸ್ಕರು ಪರಸ್ಪರ ಯಾವುದೇ ಒತ್ತಡ ಮತ್ತು ಆಮಿಷವಿಲ್ಲದ ಒಪ್ಪಿಗೆಯಿಂದ ಒಟ್ಟಿಗೆ ಬಾಳುತ್ತಿರಬೇಕು. ಈಗಾಗಲೇ ಮದುವೆಯಾಗಿದ್ದು ಆ ಮದುವೆ ಅಸ್ತಿತ್ವದಲ್ಲಿ ಇರುವಾಗ ಮತ್ತೊಬ್ಬರ ಜೊತೆ ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಇರುವ ಹಾಗಿಲ್ಲ. ಈ ನಿಯಮಗಳಿಗೆ ಒಳಪಟ್ಟು ವ್ಯಕ್ತಿಗಳು ಇಂತಹ ಸಂಬಂಧದಲ್ಲಿ ಇದ್ದರೆ ಕಾನೂನುಗಳು ಕೂಡ ಅವರ ಬೆಂಬಲಕ್ಕೆ ನಿಲ್ಲುತ್ತವೆ.

ಸಾಕಷ್ಟು ಸಮಯದಿಂದ ದೈಹಿಕ ಸಂಪರ್ಕವನ್ನೂ ಇಟ್ಟುಕೊಂಡು ಜೊತೆಗೂಡಿ ಬಾಳುತ್ತಿದ್ದ ಇಬ್ಬರು ವ್ಯಕ್ತಿಗಳಲ್ಲಿ ಗಂಡು ತನಗೆ ಆ ಸಂಗಾತಿ ಬೇಡ ಎನಿಸಿದಾಗ ರಾತ್ರೋರಾತ್ರಿ ಕೈತೊಳೆದುಕೊಂಡು ಬಿಟ್ಟು ಹೋಗುವ ಹಾಗಿಲ್ಲ. ಹಾಗೆ ಬೇರಾಗುವುದು ಆತನೊಬ್ಬನ ಇಚ್ಛೆ ಆಗಿದ್ದರೆ ಮತ್ತು ಆ ಸಂಬಂಧದಲ್ಲಿ ಇರುವಾಗ ಆಕೆಯು ಆರ್ಥಿಕವಾಗಿ ಆತನ ಮೇಲೆ ಅವಲಂಬಿತಳಾಗಿದ್ದರೆ ಆತನು ಸಂಬಂಧವನ್ನು ಮುಗಿಸಿ ಹೋಗುವಾಗ ಅವಳ ಪೋಷಣೆಗೆ ಹಣ ಬೆಂಬಲ ಒದಗಿಸಿಕೊಡುವ ಕಾನೂನಾತ್ಮಕ ಜವಾಬ್ದಾರಿ ಹೊಂದಿರುತ್ತಾನೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023 ಇದರ ಅಡಿಯಲ್ಲಿ ಆಕೆಯು ಇಂತಹ ಪರಿಹಾರವನ್ನು ಪಡೆಯಲು ಅವಕಾಶ ನೀಡಲಾಗಿದೆ. ಆದರೆ ಅದಕ್ಕಾಗಿ ತಾನು ಆತನೊಡನೆ ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಇದ್ದುದಾಗಿ ದಾಖಲೆಗಳ ಮೂಲಕ ಸಾಬೀತುಪಡಿಸಬೇಕಿರುತ್ತದೆ. ಮುಂದೊಂದು ದಿನ ಅವಶ್ಯಕತೆ ಬೀಳಬಹುದು ಎನ್ನುವ ಆತಂಕದಲ್ಲಿಯೇ ಇಬ್ಬರ ನಡುವಿನ ಪ್ರತಿಯೊಂದು ಕೊಡುಕೊಳ್ಳುವಿಕೆಯನ್ನು ಆಡಿಯೊ, ವಿಡಿಯೊ ಮಾಡಿಕೊಂಡು ಸಂತೋಷ ನೆಮ್ಮದಿಯನ್ನು ಅನುಭವಿಸಲಾರದೆ ಹಾಳು ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಇಬ್ಬರು ಒಟ್ಟಿಗೆ ವಾಸಿಸುತ್ತಿರುವ ಮನೆಯ ಬಾಡಿಗೆ ಕರಾರು, ಬ್ಯಾಂಕಿನ ಜಂಟಿ ಖಾತೆ, ಆನ್‌ಲೈನಿನಲ್ಲಿ ನಿರಂತರ ಹಣಕಾಸಿನ ವರ್ಗಾವಣೆ, ಇಬ್ಬರೂ ಸೇರಿ ಆಸ್ತಿ ಖರೀದಿಸಿದ್ದರೆ ಅದರ ಪತ್ರ, ಪಿಂಚಣಿ, ಜೀವವಿಮೆಯಲ್ಲಿ ನಾಮಿನಿಯಾಗಿರುವ ಸಾಕ್ಷಿ ಇಂತಹ ದಾಖಲೆಗಳನ್ನು ಲಿವಿನ್ ರಿಲೇಷನ್‌ಶಿಪ್ ಸಂಬಂಧದ ದೀರ್ಘಾವಧಿಯನ್ನು ಸಾಬೀತುಪಡಿಸಲು ಸಹಾಯ ಮಾಡುತ್ತವೆ.

ಒಬ್ಬ ವಿವಾಹಿತ ಪುರುಷ ಅಥವಾ ಮಹಿಳೆಗೆ ಅವರು ವಿವಾಹವು ಅಸ್ತಿತ್ವದಲ್ಲಿ ಇರುವಾಗಲೇ ಇಂತಹ ಲಿವಿನ್ ರಿಲೇಷನ್‌ಶಿಪ್ ಸಂಬಂಧದಲ್ಲಿ ಇರುವುದನ್ನು ಕಾನೂನು ಮಾನ್ಯ ಮಾಡುವುದಿಲ್ಲ. ಇದನ್ನು ವಿಚ್ಛೇಧನ ಪಡೆದುಕೊಳ್ಳಲು ಒಂದು ಕಾರಣವನ್ನಾಗಿ ಪರಿಗಣಿಸಬಹುದಾಗಿರುತ್ತದೆ. ಅಷ್ಟೇ ಅಲ್ಲದೆ **'Alienation of affection'** ಎನ್ನುವ ಪರಿಕಲ್ಪನೆಯಂತೆ ವೈಯಕ್ತಿಕ ಅಪರಾಧ ಕಾನೂನಿನ ಅಡಿಯಲ್ಲಿ ನೊಂದ ವ್ಯಕ್ತಿಯು ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಹಕ್ಕೊತ್ತಾಯ ಮಾಡಬಹುದು.

ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಇರುವಾಗ ಹುಟ್ಟುವ ಮಕ್ಕಳಿಗೆ ಅವರಿಬ್ಬರೇ ಕಾನೂನಾತ್ಮಕವಾಗಿ ತಂದೆ ತಾಯಿ ಆಗಿರುತ್ತಾರೆ ಮತ್ತು ಆ ಮಗುವಿನ ಪಾಲನೆ ಪೋಷಣೆ ಮದುವೆಯಾಗಿರುವ ಗಂಡ ಹೆಂಡತಿಗೆ ಇರುವ ಹಾಗೆಯೇ ಇವರಿಬ್ಬರಿಗೂ ಇರುತ್ತದೆ. ಆ ಮಗುವಿಗೆ ಅವರಿಬ್ಬರ ಆಸ್ತಿಯಲ್ಲಿ ಸಹಜವಾದ ಹಕ್ಕು ಬರುತ್ತದೆ. ಒಂದು ವೇಳೆ ಇಂತಹ ಸಂಬಂಧದಲ್ಲಿ ಇರುವಾಗ ಮಗು ಹುಟ್ಟಿ ತದನಂತರ ಸಂಗಾತಿಗಳಲ್ಲಿ ಯಾರೊಬ್ಬರೇ ತೀರಿಕೊಂಡರೂ ಆ ಮಗುವಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಇರುವ ಹಕ್ಕು ಕೊನೆಯಾಗುವುದಿಲ್ಲ. ಕುಟುಂಬದವರು ತಮ್ಮ ಇಚ್ಛೆಗೆ ವಿರುದ್ಧವಾಗಿ ಇಂತಹ ಸಂಬಂಧ ಇತ್ತು ಎನ್ನುವ ಕಾರಣದಿಂದ ಮಗುವಿಗೆ ಕೊಡಬೇಕಾದ ಆಸ್ತಿಯನ್ನು ನಿರಾಕರಿಸುವ ಹಾಗಿರುವುದಿಲ್ಲ.

